ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	600
2)	ಸದಸ್ಯರ ಹೆಸರು	:	ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್
3)	ಉತ್ತರಿಸಬೇಕಾದ ದಿನಾಂಕ	:	24.09.2020
4)	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ವಿಜಯಪುರ ನಗರದಲ್ಲಿ ನಿರ್ಮಾಣ ಮಾಡುತ್ತಿರುವ ವಿಮಾನ ನಿಲ್ದಾಣ ಯೋಜನೆಗೆ ಇದುವರೆಗೆ ಬಿಡುಗಡೆಯಾದ ಅನುದಾನ ಎಷ್ಟು; (ವಿವರ ನೀಡುವುದು)	ವಿಜಯಪುರ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಬರಣಪೂರ ಗ್ರಾಮದ ಹತ್ತಿರ ಸುಮಾರು 727 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಒಟ್ಟು ರೂ.63.46 ಕೋಟಿಗಳ ಅನುದಾನವನ್ನು 2007-08 ಹಾಗೂ 2008-09ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.
ಆ)	ಸದರಿ ಕಾಮಗಾರಿಯು ವಿಳಂಬವಾಗಲು ಕಾರಣವೇನು; ಅನುದಾನದ ಕೊರತೆ ಏನಾದರು ಇದೆಯೇ; (ವಿವರ ನೀಡುವುದು)	ವಿಜಯಪುರ ವಿಮಾನ ನಿಲ್ದಾಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ತೀರ್ಮಾನಿಸಿ ಯಶಸ್ವಿ ಬಿಡ್ಡುದಾರರಾದ ಮೆ॥ಮಾರ್ಗ್‌ರವರನ್ನು ಅಭಿವೃದ್ಧಿದಾರರನ್ನಾಗಿ 2010ರಲ್ಲಿ ಆಯ್ಕೆ ಮಾಡಲಾಗಿತ್ತು. ಆದರೆ ಅಭಿವೃದ್ಧಿದಾರರು ವಿಮಾನ ನಿಲ್ದಾಣಕ್ಕಾಗಿ ಗುರುತಿಸಿರುವ ಜಮೀನುಗಳು ಸಮತಟ್ಟಾಗಿಲ್ಲದಿರುವುದರಿಂದ ಹಾಗೂ ಬಂಡೆಗಳು ಇರುವುದರಿಂದ ಈ ಜಮೀನನ್ನು ಸಮತಟ್ಟುಗೊಳಿಸಲು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು ಸುಮಾರು ರೂ.100 ಕೋಟಿ ವೆಚ್ಚವಾಗುವುದು ಎಂದು ತಿಳಿಸಲಾಗಿರುತ್ತದೆ. ವಿಜಯಪುರ ವಿಮಾನ ನಿಲ್ದಾಣ ಯೋಜನೆಯು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಕಾರ್ಯಸಾಧ್ಯವಲ್ಲವೆಂದು ತಿಳಿಸಿ ಯೋಜನೆಯಿಂದ ಹಿಂದೆ ಸರಿಯಲು ಇಚ್ಛಿಸಿದ್ದರಿಂದ ಅಭಿವೃದ್ಧಿದಾರರೊಂದಿಗೆ ಮಾಡಿಕೊಂಡಿದ್ದ ಯೋಜನಾ ಅಭಿವೃದ್ಧಿ ಒಪ್ಪಂದವನ್ನು ದಿನಾಂಕ:10.01.2014 ರಂದು ರದ್ದುಗೊಳಿಸಲಾಗಿರುತ್ತದೆ.
ಇ)	ಸದರಿ ಯೋಜನೆಯ ಕಾಮಗಾರಿಯು ಯಾವ ಹಂತದಲ್ಲಿದೆ; (ಸಮಗ್ರ ಮಾಹಿತಿಯನ್ನು ನೀಡುವುದು)	ವಿಜಯಪುರ ವಿಮಾನ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಾಗಿ ರೂ.220 ಕೋಟಿ ಅಂದಾಜು ಮೊತ್ತದಲ್ಲಿ ರೂ.95 ಕೋಟಿಯಲ್ಲಿ ಮೊದಲನೇ ಹಂತದ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರದ ಆದೇಶ ದಿನಾಂಕ:23.07.2020ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಲೋಕೋಪಯೋಗಿ ಇಲಾಖೆಯು ಅಂದಾಜು ಪಟ್ಟಿಯು ಅಂತಿಮಗೊಳಿಸಿದ ನಂತರ ಸದರಿಯವರಿಂದ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಪ್ರಸ್ತುತ ಟೆಂಡರ್ ಪ್ರಕ್ರಿಯೆಯನ್ನು ಲೋಕೋಪಯೋಗಿ ಇಲಾಖೆಯಿಂದ ಪ್ರಾರಂಭಿಸಲಾಗಿರುತ್ತದೆ.
ಈ)	ಯಾವ ಕಾಲಮಿತಿಯಳಗೆ ವಿಮಾನ ನಿಲ್ದಾಣ ಮಾಡಲಾಗುವುದು? (ವಿವರ ನೀಡುವುದು)	

ಸಂಖ್ಯೆ: ಮೂಅಇ 128 ರಾಅವಿ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ